ಪ್ರತಿಬಿಂಬ
PRATIBIMBA – Multidisciplinary Kannada Research Journal of IIMRD
ISSN: 2582-2284
Vol-1 Issue 5, Mar-Apr 2020, 87-91
©*IIMRD*, Mysuru
IIMRD JOURNALS
www.iimrd.com

# ಗ್ರಾಮೀಣ ಜನರ ಬದುಕಿನಲ್ಲಿ ಸಾಹಿತ್ಯದ ಅನುಸಂಧಾನ: ಒಂದು ವಿಶ್ಲೇಷಣೆ

**ಪ್ರಕಾಶ ಬಿ**[1]

**ಪೀಠಿಕೆ**

ಅನಕ್ಷರಸ್ಥ ಜನಸಮೂಹ ಮತ್ತು ಗ್ರಾಮೀಣ ಬದುಕು ಒಂದು ನಾಣ್ಯದ ಎರಡು ಮುಖಗಳು, "ಕುರಿತೋದದೆಯಂ ಪ್ರಯೋಗ ಪರಿಣತಿ ಮತಿಗಳ್" ಕವಿರಾಜ ಮಾರ್ಗಕಾರನ ಮಾತು ಗ್ರಾಮೀಣ ಜನರಿಗೆ ಸಂದುವಂತಹದು. ಸಾಹಿತ್ಯವೆಂದರೆ ಬದುಕಿನ ಸೆಲೆಯನ್ನು ಹೊರತಾಗಿ ಹೇಳುವುದಲ್ಲ. ಪ್ರತಿಯೊಬ್ಬ ಮನುಷ್ಯನದ್ದು ಒಂದು ಕಾವ್ಯ, ಕಥೆ, ಕಾದಂಬರಿ ಆದಾಗಿಯ್ಯೂ ಗ್ರಾಮೀಣ ಜನರ ಬದುಕು ಮಹಾನ್ ಸಾಹಿತ್ಯ ಮತ್ತು ನೈಜತೆಯ ಪ್ರತಿಬಿಂಬ. ಸಾಮಾನ್ಯ ಸಾಹಿತ್ಯಗಳು ಓದಲ್ಪಡುತ್ತವೆ, ಗ್ರಹಿಸಲ್ಪಡುತ್ತವೆ, ಚರ್ಚಿಸಲ್ಪಡುತ್ತವೆ. ಆದರೆ ಗ್ರಾಮೀಣ ಜನರ ಬದುಕು ಲಿಖಿತವಾಗಿರದೇ ಇಲ್ಲದಿರುವದರಿಂದ ಯಾವ ಪ್ರಕ್ರಿಯೆಗಳು ನಡೆಯುವುದಿಲ್ಲ. ಕೇವಲ ನೋಡುವುದು, ಮರುಕ ಪಡುವದರಲ್ಲಿಯೇ ಸಾಂತ್ವನಗೊಳ್ಳುತ್ತವೆ. ಈ ಧನ್ಯತೆಯು ಕೊನೆಯಾಗಿ ಆಶಾವಾದಿತ್ವದ ನೈಜ ಪರಿಹಾರಗಳು ಆಧುನಿಕ ಸಾಹಿತ್ಯದ ಮೂಲಕವಾದರೂ ಬೆಳಕಿಗೆ ಬರಲಿ ಎನ್ನುವಂತದ್ದು. ಗ್ರಾಮೀಣ ಜನರ ಬದುಕಿನ ಚಿತ್ರಣವನ್ನು ಸಮಗ್ರವಾಗಿ ಸೆರೆಯಿಡಿಯುವ ಪ್ರಯತ್ನ ಈ ಲೇಖನದ ಉದ್ದೇಶವಾಗಿದೆ.

ಗ್ರಾಮೀಣ ಜನರ ಬದುಕು ಜಂಗಮದ ಬದುಕು. ಬಸವಣ್ಣನವರು ಹೇಳುವಂತೆ ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ. ಪ್ರತಿನಿತ್ಯ ಹೊಸತು ಈ ಜನರದ್ದು ಯಾಂತ್ರಿಕ ಜೀವನವಲ್ಲ. ಪ್ರತಿಯೊಂದು ಅವಶ್ಯಕತೆಗಳನ್ನು ಹೋರಾಟ ಮಾಡಿಯೇ ಪಡೆಯಬೇಕು. ಅವಿದ್ಯಾವಂತರಾಗಿ ಬಲ್ಲವರ ಜೊತೆಯಲ್ಲಿ ತನ್ನ ಬೇಕುಗಳನ್ನು ಪೂರೈಸಿಕೊಳ್ಳಬೇಕು. ಇಂತಹ ಹೋರಾಟದಲ್ಲೇ ಸಾಹಿತ್ಯ/ಕಾವ್ಯಗಳು ಉದಯಿಸುವಂತಹವು. ಸಾಹಿತ್ಯ ಎನ್ನುವುದು ಸುಖದ ಸುಪ್ಪತ್ತಿಗೆಯ ಹಾಸಿಗೆಯಲ್ಲಿ ಹುಟ್ಟುವುದಿಲ್ಲ, ಹುಟ್ಟಿದರೂ ಕೂಡ ರುಚಿಸದು. ದಮನಿತ ತುಳಿತದಲ್ಲಿ ಹುಟ್ಟುವ ಕಾವ್ಯ, ಸತ್ವ, ರುಚಿ, ಎಲ್ಲವೂ ಕಾವ್ಯವಾಗುತ್ತದೆ. ರಮ್ಯವಾದದ್ದು ಆನಂದಗೊಳಿಸುವಂತದ್ದು ಮಾತ್ರ ಸಾಹಿತ್ಯವೆಂಬ ಅಭಿಪ್ರಾಯ ಬಹುತೇಕ ಜನರದ್ದು, ತುಳಿತಕ್ಕೊಳಗಾದ ಜೀವಗಳಿಗೆ ದನಿಯಾದ ದಲಿತ ಸಾಹಿತ್ಯ, ಬಂಡಾಯ ಸಾಹಿತ್ಯ ಹುಟ್ಟು ಗ್ರಾಮೀಣ ಬದುಕಿನ ಜನರಲ್ಲಿ ಎಂಬುದು ಸಾರ್ವಕಾಲಿಕ ಸತ್ಯ.

"ಜನವಾಣಿ ಬೇರು, ಕವಿವಾಣಿ ಹೂವು" ಎಂಬ ಬಿ.ಎಂ.ಶ್ರೀ ಮಾತಿನಲ್ಲಿ ಕಾವ್ಯ ಮರವಾಗಿ, ಕಾಯಾಗಿ, ಹೂವಾಗಿರಬೇಕೆಂದರೆ ಬೇರು ಸೊಂಪಾಗಿರಬೇಕು, ಗಟ್ಟಿಮುಟ್ಟಾಗಿರಬೇಕು. ಇಂದಿನ ಜಗತ್ತಿನ ಎಲ್ಲಾ ಭಾಷೆಗಳ ಸಾಹಿತ್ಯ ಕಾವ್ಯಗಳು ನಳನಳಿಸುತ್ತಿವೆ ಎನ್ನುವುದಾದರೆ ಅದಕ್ಕೆ ಹಳ್ಳಿ ಜನರ ಬದುಕು

[1] ***ಸಹಾಯಕ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶಿರಸಿ***

ಮೂಲ ಬೇರು. ಆ ಸಾಹಿತ್ಯ ಕೇವಲ ಸಾಹಿತ್ಯವಲ್ಲ. ಜನಪದ ಸಮಾಜದ ಅನುಭವ ಜ್ಞಾನದ ಪುಷ್ಪವಾಗಿದೆ. ಕಾವ್ಯ ಕಲ್ಪನೆಯನ್ನು ನಿಜಸತ್ಯವನ್ನಾಗಿ ಹೇಳುತ್ತದೆ. ಆದರೆ ಹಳ್ಳಿಜನರ ಬದುಕು ಕಲ್ಪನೆಯಲ್ಲ, ಕನಸುಗಳ ಕಾಮನಬಿಲ್ಲುಗಳಲ್ಲ. ಪ್ರತಿದಿನವೂ, ಪ್ರತಿಕ್ಷಣವೂ ನಿಜಸತ್ಯ, ವಾಸ್ತವ, ಹಳ್ಳಿಜನರ ಬದುಕಿನಲ್ಲಿ ಸಾಂಸ್ಕೃತಿಕ ಸಿರಿ ಇದೆ. ಅವರ ಬದುಕಿನ ಪ್ರತಿ ಎಳೆಯಲ್ಲೂ ಕಾವ್ಯದ ಕುಸುರಿ ಇದೆ.

ಕನ್ನಡ ಸಾಹಿತ್ಯದಲ್ಲಿ ನವೋದಯ, ಪ್ರಗತಿಶೀಲ, ನವ್ಯಸಾಹಿತ್ಯ ಘಟ್ಟಗಳು ಶಿಷ್ಟಬರವಣಿಗೆಯಲ್ಲಿ ಗುರ್ತಿಸಿಕೊಂಡವು. ದಲಿತ ಬಂಡಾಯ ಮನೋಧೋರಣೆಯು ಜನಸಾಮಾನ್ಯರ ಗ್ರಾಮೀಣ ಬದುಕಿನ ಬಗ್ಗೆ ಮೊದಲು ಧ್ವನಿಯಾಯಿತು. ಗ್ರಾಮೀಣ ಜನರು ವರ್ಣ ಮತ್ತು ಜಾತಿ ವ್ಯವಸ್ಥೆ ಪದ್ಧತಿಗಳಿಂದ ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ, ಆರ್ಥಿಕವಾಗಿ, ಧಾರ್ಮಿಕವಾಗಿ ದಮನಕ್ಕೆ ಒಳಗಾಗಿ ಶೋಷಣೆ, ದಾರಿದ್ರ್ಯ, ಹಸಿವು, ಅನಕ್ಷರತೆ ನಿರುದ್ಯೋಗಳಿಂದ ನರಳುತ್ತಿದ್ದರು. ಆ ಸಂದರ್ಭದಲ್ಲಿ ನೋವಿನ ನೆಲೆಯಿಂದ ಬಂದ ಅಂಬೇಡ್ಕರ್ ದಲಿತರ ಧ್ವನಿಯಾಗಿ ನಿಂತರು. ಸ್ವಾಭಿಮಾನದ ಸಂಕೇತವಾದ ಅಂಬೇಡ್ಕರ್ ಪ್ರತಿಪಾದಿಸಿದ ಶಿಕ್ಷಣ–ಸಂಘಟನೆ–ಹೋರಾಟದ ಮೂಲಕ ಸ್ವ–ಸುಧಾರಣೆ, ಸ್ವ–ಪ್ರಗತಿ– ಸ್ವ ಪ್ರಯತ್ನದ ಗ್ರಾಮೀಣ ಜನರ ಬದುಕಿಗೆ ದಲಿತ–ಬಂಡಾಯ ಸಾಹಿತ್ಯಗಳು ನೆಲೆಯಾಗಿಸಿದವು.

ದೇವನೂರು ಮಹಾದೇವರವರ ಒಡಲಾಳದ ಸಾಕವ್ವನ ತೊಳಲಾಟ ಕಾರಂತರ ಚೋಮನದುಡಿಯ ಚೋಮನ ಬದುಕು. ಬೆಳ್ಳಿಯ ಜೀವದ ಸಲೆಯಲ್ಲಿ ಮಡಿ, ಮೈಲಿಗೆಯ ಸೋಂಕಿಲ್ಲ ನಿಜ. ಜೀವನದ ಅನಾವರಣ ಯಥಾವತ್ತಾಗಿ ಮೂಡಿಬಂದಿದೆ. ರಾವ್‌ಬಹೂದ್ದೂರ್‌ರ ಗ್ರಾಮಾಯಣ ಕಾದಂಬರಿಯಲ್ಲಿ ಸಮಕಾಲೀನ ಸಂದರ್ಭವನ್ನು ಸಂವೇದನೆಯನ್ನು ಮತ್ತು ತಳಮಳವನ್ನು ತೀವ್ರವಾಗಿ ಗಂಭೀರವಾಗಿ ಮತ್ತು ಕಲಾತ್ಮಕವಾಗಿ ದಾಖಲಿಸುತ್ತದೆ. ಭಾರತ ಗ್ರಾಮಗಳ ದೇಶ ಎಂಬುದಕ್ಕೆ ಈ ಕಾದಂಬರಿಯಲ್ಲಿ ಪಾದಳ್ಳಿ ಕುರಿತ ಒಳ ನೋಟ ಭಾರತ ದೇಶದ ಕಾವ್ಯವನ್ನು ಕಟ್ಟಿಕೊಡುತ್ತದೆ.

ಮರಾಠಿ, ತೆಲಗು ನಾಡುಗಳಲ್ಲಿ ಕಟ್ಟಿದ ದಲಿತ ಮತ್ತು ಬಂಡಾಯದ ಸಾಹಿತ್ಯ– ಗ್ರಾಮೀಣ ಜನರ ಬದುಕಿನ ಸಾಹಿತ್ಯ. ಕೆಳವರ್ಗದವರ ತಾಜಾ ಅನುಭವಗಳ ವಸ್ತುನಿಷ್ಠ ದಾಖಲೆ, ಒಡಲಾಳದ ಕಾವ್ಯ ದಲಿತರ, ಬಡವರ, ಹಸಿವು, ರೋಗರುಜಿನ, ಶೋಷಣೆಯ ಸ್ವರೂಪದ ಯಾತನೆಯನ್ನು ಚಿತ್ರಿಸುವ ಕಾದಂಬರಿ ಮತ್ತು ಕಾವ್ಯ 'ಇಕ್ರಲ್ಲ, ಬದಿರ್ಲಾ ಈ ನನ್ ಮಕ್ಲು ಚರ್ಮ ಎಬ್ರುಲ್ಲ' ಎಂಬ ಆವೇಶದ ಸಾಲುಗಳಲ್ಲಿ ಗ್ರಾಮೀಣ ಸೊಲ್ಲು ಕಾವ್ಯವಾಗಿ ದಾಖಲಾಗಿವೆ. ದಲಿತರ ಸಾಚಾ ಕಳಕಳಿಯ ಬದುಕಿನ ನೋವು ಇಷ್ಟೊಂದು ಉಗ್ರ ಸ್ವರೂಪದಲ್ಲಿ ತಮ್ಮನ್ನು ಶೋಷಿಸುವವರ ವಿರುದ್ಧ ಧ್ವನಿಯಾಗಿ ಕಂಡಿತು.

ಮನಜರವರ 'ಮಾಗಿ', ಕಾ.ತಾ.ಚಿಕ್ಕಣ್ಣರ 'ಮುಂಜಾವು' ಮುಳ್ಳೂರು ನಾಗರಾಜರ 'ಮರಣ ಮಂಡಲ ಮಧ್ಯದೊಳಗೆ' ಕಾವ್ಯಗಳು ಗ್ರಾಮೀಣ ಜನರ ಬದುಕಿನ ಟಿಸಿಲುಗಳನ್ನು ಕಾವ್ಯವಾಗಿ ರೂಪಿಸಿವೆ. ಕುಂ.ವೀರಭದ್ರಪ್ಪರವರ ಬರಹಗಳು ಗ್ರಾಮೀಣ ಬದುಕಿನ– ಕಾವ್ಯಗಳಾಗಿವೆ. ಶ್ರೀ ಕೃಷ್ಣ ಆಲನಹಳ್ಳಿಯವರ ಕಾಡು, ಕಾದಂಬರಿಯಲ್ಲಿ ಹಳ್ಳಿಯೊಳಗಿನ ಜಿದ್ದುಗಳು, ನಂಬಿಕೆಗಳು, ಕಾಮದ ಗೊಂದಲವನ್ನು ಕಿಟ್ಟಿ ಎಂಬ ಪುಟ್ಟ ಹುಡುಗನ ಪಾತ್ರದ ಮೂಲಕ ಕಟ್ಟಿಕೊಡುತ್ತಾರೆ.

ಗ್ರಾಮೀಣ ಜನರಲ್ಲಿನ ವಿಶಿಷ್ಟ ಕಲೆಯಾಗಿ ರೂಪುಗೊಂಡಿರುವ, ವೀರಗಾಸೆ ರಂಗಕಲೆ, ಯಕ್ಷಗಾನ, ಬಯಲಾಟ, ಕಂಸಾಳೆ, ಡೊಳ್ಳುಕುಣಿತ, ಪೂಜಾ ಕುಣಿತ, ಉಮ್ಮತ್ತಾಟ, ಪಟದ ಕುಣಿತ, ಸುಗ್ಗಿ ಕುಣಿತ, ಸಣ್ಣಾಟ, ದೊಡ್ಡಾಟ, ಶ್ರೀ ಕೃಷ್ಣ ಪಾರಿಜಾತ, ತಮಟೆ ವಾದ್ಯ, ಡೊಳ್ಳು ವಾದ್ಯ ಗ್ರಾಮೀಣ ಭಾರತದ ತಾಯಿ ಬೇರು ಕಾವ್ಯ– ಕಲೆಯಾಗಿ ರೂಪುಗೊಂಡಿವೆ. ಈ ಎಲ್ಲಾ ಜನಪದ ಕಲೆಗಳಲ್ಲಿ ಗ್ರಾಮೀಣ ಜನರ ಬದುಕು ಅಂತರ್ಗತಗೊಂಡಿದೆ. ಗ್ರಾಮೀಣ ಬದುಕಿನ ನೈಜತೆಯ ಕಲಾ ಸಂಗಮ ಮೇಳೈಸಿಕೊಂಡಿದೆ. ಗ್ರಾಮೀಣ ಜನರ ಈ ಕಲೆಗಳು ಇಂದಿಗೂ ನಮ್ಮ ಹಳ್ಳಿಗಳಲ್ಲಿ ಜೀವಂತವಾಗಿದೆ. ಈ ಅಂಶವನ್ನು ಗಮನಿಸಿದಾಗ ಸಾಹಿತ್ಯವೆಂದರೆ ಕಥೆ, ಕಾದಂಬರಿ ಪದ್ಯ ಮಾತ್ರವಲ್ಲ ಬದಲಿಗೆ ಸುಖ–ಸಂತೋಷ, ಸಂಭ್ರಮಿಸುವದರೊಂದಿಗೆ ಜೀವನವನ್ನು ಯೋಚಿಸುವ ವಿವೇಕ ನೀಡುವುದಾಗಿದೆ.

ನಿರಂತರ ದುಡಿಮೆಯಲ್ಲಿ ಹೊಟ್ಟೆ–ಬಟ್ಟೆಗಾಗಿಯೇ ಹೋರಾಟ ಮಾಡುವ ಹಳ್ಳಿಜನರ ಬದುಕಿನಲ್ಲಿ ಕಾವ್ಯದ ಅಂತರಂಗದ ಧ್ವನಿ ಸೇರಿಕೊಂಡಿದೆ. ನಂಬಿಕೆ–ಆಚಾರ–ವಿಚಾರ, ಹಬ್ಬ–ಹರಿದಿನಗಳಲ್ಲಿ ಕಾವ್ಯದ ಸೊಗಡು ಮೇಳೈಸಿಕೊಂಡಿದೆ. 'ನೀ ನನಗಿದ್ದರೆ ನಾ ನಿನಗೆ ನೆನಪಿರಲಿ ನುಡಿ ನಮ್ಮೊಳಗೆ' ಎಂಬ ಕಾವ್ಯದ ಧರ್ಮದ ಸಾರ ನೆಲೆಯಾಗಿದೆ. ಜಗತ್ತಿನ ಎಲ್ಲಾ ಸಾಹಿತ್ಯಗಳು ಬದುಕಿನ ಕ್ಷಣಗಳ ಸೂಕ್ಷ್ಮತೆಯನ್ನು ಅಂತರಂಗದಲ್ಲಿ ಸ್ಪುರುಸಿ ಓದುವ ಕಾವ್ಯಗಳನ್ನು ಕಟ್ಟುತ್ತವೆ. ಕಾವ್ಯವೆಂದರೆ ಅನುಭಾವ ವಿಭಾವಗಳನ್ನು ವರ್ಣಿಸುವುದು ಮೀಮಾಂಸಕರು ಹೇಳುತ್ತಾರೆ. ಹಳ್ಳಿಜನರ ಬದುಕಿನಲ್ಲಿ ಅನುಭಾವ, ವಿಭಾವ ಸ್ಥಾಯಿಭಾವಗಳು ಹಳ್ಳಿಬದುಕಿನ ಕಚ್ಚಾಟ–ಬೈದಾಟ ಹೊಡೆದಾಟಗಳಲ್ಲೇ ಸಮ್ಮಿಳಿತವಾಗಿದೆ. ಕಾವ್ಯರಸಿಕತನವನ್ನುಂಟು ಮಾಡಬೇಕು ಎಂಬುದು ಸಾರ್ವತ್ರಿಕ ಅಭಿಪ್ರಾಯ ಹಳ್ಳಿಗಾಡಿನ ಸರಸ–ವಿರಸಗಳ ಮಾತುಗಳಲ್ಲಿ ಸಹಜವಾಗಿ ಕಾವ್ಯದ ರಸಿಕತೆ ಹೂರಣಗೊಂಡಿದೆ. ಜಾನಪದ ಸಾಹಿತ್ಯದಲ್ಲಿ ಒಳತಿರುಳು ಏನು? ಎಂಬ ಪ್ರಶ್ನೆ ಉದ್ಭವಿಸಿದಾಗ ಒಳ್ಳೆಯದು ಮತ್ತು ಕೆಟ್ಟದರ ಸಂಘರ್ಷ ಶಕ್ತಿ ಮತ್ತು ಪ್ರತಿ ಶಕ್ತಿಗಳ ಸಮರ ಸಾಮಾಜಿಕವಾಗಿ ಮೊದಮೊದಲು ಕೆಟ್ಟದ್ದೇ ಗೆಲ್ಲುವುದು ಎಂದುಕೊಂಡರೂ, ಕೊನೆಗೆ ಗಲ್ಲುವುದು ಒಳ್ಳೆಯದು ಎಂದು ಹಳ್ಳಿಗಾಡಿನ ಜನರ ಬದುಕಿನ ಸಾಹಿತ್ಯ ಸಾರಿಹೇಳುತ್ತದೆ.

ಸಾಹಿತ್ಯಗಳು ಮೌಲ್ಯಗಳನ್ನು ಉಳಿಸಬೇಕು, ಬೆಳೆಸಬೇಕು ಎಂದು ಹೇಳುತ್ತಾರೆ. ಹಳ್ಳಿಜನರ ಬದುಕಿನ ಹಿನ್ನಲೆಯಲ್ಲಿ ಮೌಲ್ಯಗಳು ಬೇರೆಯಾಗಿಲ್ಲ, ಬದುಕು ಬೇರೆ ಅಲ್ಲ. ಏಳುತ್ತಲೇ ಎದ್ದು ಯಾರ್‍ಯಾರ ನೆನೆಯಲಿ, ಎಳ್ಳುಜೀರಿಗೆ ಬೆಳೆಯೋಲ, ಭೂಮಿತಾಯಿಯ ಎದ್ದೊಂದು ಗಳಿಗೆ ನೆನೆದೇನ ಎನ್ನುವುದರಲ್ಲಿ ಭಕ್ತಿ, ಶ್ರದ್ಧೆ ನಿಷ್ಕಲ್ಮಷ ಪ್ರೀತಿ, ಕೃತಜ್ಞತೆಯ ಮೌಲ್ಯಗಳು ಕಾವ್ಯವಾಗಿ ಮುಪ್ಪರಿಗೊಂಡಿವೆ ಎನ್ನಬಹುದು.

ಸಂಸ್ಕೃತಿಯ ನಿಜವಾದ ಮುಖ ಹಳ್ಳಿಗಾಡಿನ ಜನರ ಬದುಕು ಬೇಸಾಯ, ಮೀನುಗಾರಿಕೆ, ಬೇಟೆ, ಮಡಕೆ ಮಾಡುವುದು, ಬಂಧು–ಬಳಗ, ವಿವಾಹ ಮತ್ತು ಕುಟುಂಬ, ಆಚರಣೆಗಳು ಕಾವ್ಯ ಸಂಸ್ಕೃತಿಯನ್ನು ಹೇಳುತ್ತದೆ, ಬಿಚ್ಚಿಡುತ್ತದೆ. ಜನಪದರ ಬದುಕಿನ ಸಂಸ್ಕೃತಿ ಶುದ್ಧ ಕಾವ್ಯದ ಪಡಿಯಚ್ಚಾಗಿದೆ. ಜನಪದರ ಜನಪದ ಗೀತೆಗಳು, ಕಥೆಗಳು ಗ್ರಾಮೀಣ ಸಮುದಾಯದ ಸುಖ–ದುಖಃಗಳನ್ನು ಹೇಳುವ ತತ್ವಭರಿತ ಸಾಹಿತ್ಯಗಳಾಗಿವೆ. ಶಾಸ್ತ್ರೀಯ ಕಾವ್ಯಗಳು ಸಾಹಿತ್ಯಿಕ ಮೌಲ್ಯ ಹೇಳಿದರೆ ಹಳ್ಳಿಯ ಜನಪದ ಗೀತೆಗಳು ಸಾಮಾಜಿಕ, ಚಾರಿತ್ರಿಕ, ಮನಶಾಸ್ತ್ರೀಯ ಮೌಲ್ಯಗಳನ್ನು ಗಮನಸೆಳೆಯುತ್ತವೆ. ನೆರೆಹೊರೆಯ ಜನರಲ್ಲಿ

ಆತ್ಮೀಯ ಸಂಪರ್ಕವಿದ್ದು ಕಾವ್ಯದ ಅನುಸಂಧಾನ ಜೀವಜನ್ಯದಿಂದ ರೂಪುಗೊಂಡಿರುತ್ತದೆ. ಜೋಗುಳ ಪದಗಳು ಕುಟ್ಟುವ, ಬೀಸುವ, ಕೇರುವ, ನಾಟಿಪದಗಳಲ್ಲಿ ಸೋಬಾನೆ ಹಾಡುಗಳಲ್ಲಿ ಸಹಜ ಕಾವ್ಯ ಹೇಳುವ ಮಾತುಗಳಿಗಿಂತ ಸತ್ವ ಭಾವ ತುಂಬಿದ ಹೃದಯ ಸಂವೇದನಾ ಅನುಭವಗಳು ಅನುರೂಪತೆಯಿಂದ ಸಂಗಮಗೊಂಡಿರುತ್ತವೆ. ಜಗತ್ತಿನ ಎಲ್ಲಾ ಸಾಹಿತ್ಯಗಳು ಪ್ರಕೃತಿಯನ್ನು ಬಿಟ್ಟು ಏನನ್ನು ಹೇಳಲಾರವು. ಹಳ್ಳಿಯೆಂದರೆ ಪ್ರಕೃತಿಯ ಜನರ ಒಡನಾಟ ಕರುಳ ಬಳ್ಳಿಯ ಸಂಬಂಧ ಹೊಲಗದ್ದೆಗಳನ್ನು ನೋಡದ ದಿನಗಳು ಇಲ್ಲ. ದುಡಿಮೆಯೊಂದಿಗೆ ಪ್ರಕೃತಿಯ ಸಾಕ್ಷಾತ್ಕಾರ, ಮುಕ್ತಿ, ಬದುಕಿನ ತಲ್ಲಣಗಳಿಗೆ ಪ್ರಕೃತಿಯೇ ಎರಡನೇ ಉಸಿರು. ಹಳ್ಳಿಜನರ ಜೀವನ ಮಣ್ಣಿಗೆ ಹತ್ತಿರವಾದದ್ದು, ಮಣ್ಣಿನ ವಾಸನೆಯಲ್ಲಿ ಸುಮಧುರ, ಸುಗಂಧಕಾವ್ಯ ಅಡಗಿರುತ್ತದೆ. ಗಾದೆಗಳು ಹುಟ್ಟಿರುವುದೇ ಹಳ್ಳಿಗಳಲ್ಲಿ. ಗಾದೆಗಳು ಜನಸಾಮಾನ್ಯರ ಸೃಷ್ಟಿ ಹಾಗೆಯೇ ಅವರ ಬದುಕಿನ ಅನನ್ಯ ಸಂಗಾತಿ ಕೂಡ ಕಿರಿದರಲ್ಲಿ ಹಿರಿದಾದ ಅರ್ಥ ತುಂಬಿದ ಗಾದೆಗಳು ಜನಾನುಭವದ ಜೀವನ ಮಂದಾರದ ಸಂಸ್ಕೃತಿ ಪರಾಗಗಳು, ಜನಸಾಮಾನ್ಯರ ಕಣ್ಣಿರಿಗೆ ಪನ್ನೀರು ಈ ಗಾದೆಗಳು ಗಾದೆಯೇ ಆದಿಯಾದ ಜನಪದ ಸಾಹಿತ್ಯ ನಮ್ಮ ಬದುಕನ್ನು ಮತ್ತೆ ತುಂಬಿಕೊಳ್ಳಲಾರದೆಂದೇ ಕಾಣುತ್ತದೆ. ಹಳ್ಳಿಜನರ ಆಗಾಧ ಪ್ರೀತಿ, ವಾತ್ಸಲ್ಯಗಳು ತುಂಬಿಕೊಂಡಿರುತ್ತವೆ ಎಂಬುದನ್ನು ಮರೆಯಲಾಗುವುದಿಲ್ಲ. ಸ್ನೇಹ ಸೌಹಾರ್ದಗಳು ಇವರ ಪಾಲಿಗೆ ಸ್ವಾರ್ಥ ಸಮಾಜದಲ್ಲಿ ನಡೆಯುತ್ತಿದ್ದ ಅನ್ಯಾಯ, ಅಧರ್ಮ, ವಂಚನೆ, ಮೋಸ, ಡಾಂಭಿಕತೆ, ಕೀಳುಮೇಲುಗಳ ಭಾವನೆಗಳನ್ನು ಪ್ರಬಲವಾಗಿ ವಿರೋಧಿಸಿದ್ದರು. ಸಾಧ್ಯವಿಲ್ಲವೆಂದಾಗ ಮಾರ್ಮಿಕವಾದ ಮಾತಿನ ಮೂಲಕ ಪ್ರತಿಭಟಿಸುವರು, ಇರಿತವಿಲ್ಲದ ಮೊನಚು ಮಾತುಗಳಲ್ಲಿ ಅಸೂಯೆಯಿಲ್ಲದೆ ವಿಡಂಬನೆಯ ಮೂಲಕ ಸಮಾಜ ಸಂಸ್ಕಾರ ವ್ಯಕ್ತಿಯ ಉದ್ಧಾರ ಮತ್ತು ಶಾಂತಿ ಸಮಾನತೆಗಳ ಸ್ಥಾಪನೆಯ ಹಿಂದೆ ಹೃದಯವನ್ನು ಒಲಿಸಿ ತಿದ್ದಿ ಬೆಳೆಸುವ ಸಂಸ್ಕಾರದಲ್ಲಿ ಸಾಹಿತ್ಯದ ಉದ್ದೇಶಗಳು ಸಾರ್ಥಕಗೊಂಡಿದೆ. ಸಾಹಿತ್ಯಗಳ ಸಾಮಾಜಿಕ ಪ್ರಜ್ಞೆಯ ಉದ್ದೇಶ ಈಡೇರಿದೆ.

**ಉಪಸಂಹಾರ**

ಪುರಾತನ ಮಾನವ ತನ್ನ ಭಾವೋದ್ಗಾರಗಳಿಗೆ ಪ್ರಪ್ರಥಮವಾಗಿ ಗವಾಕ್ಷ ತೆರೆದದ್ದು ಹಳ್ಳಿಜನರ ಸಾಹಿತ್ಯದ ಮೂಲಕವಾಗಿಯೇ ವ್ಯಕ್ತಿರೂಪದ ಸಾಹಿತ್ಯಕ್ಕೆ ಹಳ್ಳಿಜನರ ಬದುಕಿನ ಸಮಷ್ಟಿರೂಪದ ಸಾಹಿತ್ಯವೇ ಮೂಲ ಹಾಗೂ ಪ್ರೇರಕ. ಗ್ರಾಮೀಣ ಜನರ ಬದುಕೇ ಸಾಹಿತ್ಯ. ಇವರ ಬದುಕನ್ನು ಹಸನು ಮಾಡುವ ಪುಸ್ತಕ ರೂಪದ ಕಾವ್ಯಗಳು ಇನ್ನೂ ಮುಂದಾದರೂ ಈ ಜಗತ್ತಿನಲ್ಲಿ ಉದಯಿಸಲಿ. ಅಂತಹ ಕಾವ್ಯ ಶ್ರೇಷ್ಠ ಮಹಾನ್ ಕಾವ್ಯವಾಗುತ್ತದೆ. ರಾಘವಾಂಕನ "ಜನ ಬದುಕಬೇಕೆಂದು ಕಾವ್ಯಮಂ ಪೇಳ್ದೆ" ಎಂಬ ಮಾತು ಕಾವ್ಯದಿಂದ ಜನ ಬದುಕಬೇಕೆ ಹೊರತು ಸಾಯಬಾರದು ಅಂತ ಬದುಕಿಸುವ ಕಾವ್ಯಗಳು ಹುಟ್ಟಲಿ. ಗೊರವರ, ಡುಂಡುಚಿ, ಬೀರನ ಕಥೆ, ಬೀದಿವರೆ ಇತ್ಯಾದಿಗಳು ಸಾಹಿತ್ಯವಾಗಲಿ. ಕಪೋಲಕಲ್ಪಿತ ಸಾಹಿತ್ಯಕ್ಕಿಂತ ಹಳ್ಳಿಜನರ ಬದುಕು ಕಾವ್ಯವಾಗಲಿ, ಜನರ ನೋವಿಗೆ ಮಿಡಿಯುವ ಖಡ್ಗವಾಗಲಿ.

**ಪರಾಮರ್ಶನ ಗ್ರಂಥಗಳು**


- ಆಲನಹಳ್ಳಿ ಕೃಷ್ಣ (1971). ಕಾಡು, ಭಾರತೀ ಪ್ರಕಾಶನ, ಬೆಂಗಳೂರು.
    - ಬರಗೂರು ರಾಮಚಂದ್ರಪ್ಪ. (2001). ಸಂಸ್ಕೃತಿ, ಶ್ರಮ, ಸೃಜನಶೀಲತೆ, ಅಂಕಿತ ಪುಸ್ತಕ, ಬೆಂಗಳೂರು.
- ಚಿಕ್ಕಣ್ಣರ ಕಾ.ತಾ. (1982). ಮುಂಜಾವು. ಅಭಿನವ ಪ್ರಕಾಶನ, ಬೆಂಗಳೂರು.
- ದೇವನೂರ ಮಹಾದೇವ. (2015). ದ್ಯಾವನೂರು ಹಾಗೂ ಒಡಲಾಳ. ಪುಸ್ತಕ ಪ್ರಕಾಶನ, ಮೈಸೂರು.
- ಮನಜ. (1989). ಮಾಗಿ. ಹೊಸದಿಕ್ಕು ಪ್ರಕಾಶನ, ಬೆಂಗಳೂರು.
- ಮುಳ್ಳೂರು ನಾಗರಾಜ. (1986). ಮರಣ ಮಂಡಲ ಮಧ್ಯದೊಳಗೆ. ಹೊಸದಿಕ್ಕು ಪ್ರಕಾಶನ, ಬೆಂಗಳೂರು.
- ರಾಜಪ್ಪ ದಳವಾಯಿ. (1996). ಕನ್ನಡ ಸಾಹಿತ್ಯ ಕೋಶ. ದಳವಾಯಿ ಪ್ರಕಾಶನ, ಬೆಂಗಳೂರು
- ರಾಮಚಂದ್ರೇ ಗೌಡ ಹಿ.ಶಿ. (2004). ಜಾನಪದ ಗ್ರಹಿಕೆ, ಪರಿಕಲ್ಪನೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.
- ರಾಗಾ. (1978). ಜನಪದ ಸಾಹಿತ್ಯ ರೂಪಗಳು, ತನುಮನ ಪ್ರಕಾಶನ, ಮೈಸೂರು.
- ರಾವ್‌ಬಹೂದ್ದೂರ್. (1970). ಗ್ರಾಮಾಯಣ. ಉಷಾ ಸಾಹಿತ್ಯ ಮಾಲೆ, ಮೈಸೂರು.
- ಶಿವರಾಮ ಕಾರಂತ. (1931). ಜೋಮನದುಡಿ. ಎಸ್.ಬಿ.ಎಸ್. ಬೆಂಗಳೂರು.


IIMRD JOURNALS